## 129. ಯಂತ್ರದಿಂದ ಸೋಂಕು ನಿವಾರಕ ಸ್ಪ್ರೇ

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊರೊನಾ ಸೋಂಕು ನಿಯಂತ್ರಿಸುವ ನಿಟ್ಟಿನಲ್ಲಿ 8 ಸಾವಿರ ಲೀಟರ್ ಸಾಮರ್ಥ್ಯದ ಹಾಗೂ ವೃತ್ತಾಕಾರದಲ್ಲಿ ಸೋಂಕು ನಿವಾರಕ ದ್ರಾವಣ ಸಿಂಪಡಣೆ ಮಾಡಲು ಮಿಸ್ಟ್ ಕೆನಾನ್ ಯಂತ್ರ ಬಳಕೆ ಮಾಡಲಾಗುತ್ತದೆ ಎಂದು ಕಂದಾಯ ಸಚಿವ ಹಾಗೂ ವಿಪತ್ತು ನಿರ್ವಹಣೆ ಪ್ರಾಧಿಕಾರದ ಉಪಾಧ್ಯಕ್ಷ ಆರ್.ಅಶೋಕ್ ತಿಳಿಸಿರುತ್ತಾರೆ.

ವಿಧಾನ ಸೌಧ ಪೂರ್ವದ್ವಾರದ ಬಳಿ ದ್ರಾವಣ ಸಿಂಪಡಣಾ ಯಂತ್ರಕ್ಕೆ ಚಾಲನೆ ನೀಡಿ ಮಾತನಾಡಿದರು. ನಗರದಲ್ಲಿ ಸೋಂಕಿತರ ಸಂಖ್ಯೆ ತೀವ್ರವಾಗಿ ಹೆಚ್ಚುತ್ತಿದೆ. ಅದನ್ನು ತಡೆಯುವ ನಿಟ್ಟಿನಲ್ಲಿ ವ್ಯಾಪಕವಾಗಿ ಸೋಂಕು ನಿವಾರಕ ಸಿಂಪಡಣೆ ಮಾಡಬೇಕಿದೆ. ಮಿಸ್ಟ್ ಕೆನಾನ್ ಯಂತ್ರಕ್ಕೆ ಚಾಲನೆ ನೀಡಲಾಗಿದೆ. ಈ ಯಂತ್ರವು 8 ಸಾವಿರ ಲೀಟರ್ ಸಾಮರ್ಥ್ಯ ಹೊಂದಿದ್ದು, ವೃತ್ತಾಕಾರದಲ್ಲಿ 50 ಮೀಟರ್ ದೂರದವರೆಗೆ ಸಿಂಪಡಣೆ ಮಾಡಲಿದೆ. ಯಂತ್ರಕ್ಕೆ 17 ಚಿಮ್ಮನಗಳಿಗೆ ಅಳವಡಿಸಲಾಗಿದೆ. ಕಿರಿದಾದ ಸ್ಥಳಗಳಲ್ಲಿ ಸೋಂಕು ಸಿಂಪಡಿಸಲು ಅಳವಡಿಸಿರುವ 30 ಮೀಟರ್ ಉದ್ದದ ಪೈಪ್ ಇದ್ದು, ರೀಮೋಟ್ ಕಂಟ್ರೋಲ್ ಮೂಲಕ ದ್ರಾವಣ ಸಿಂಪಡಿಸಬಹುದಾಗಿದೆ ಎಂದರು.

ಯಂತ್ರವು 11 ಕೆವಿ ಸಾಮರ್ಥ್ಯ ಹೊಂದಿದ್ದು, 45 ಎಚ್.ಪಿ ಸಾಮರ್ಥ್ಯ ಜನರೇಟರ್ ವ್ಯವಸ್ಥೆ ಕಲ್ಪಿಸಲಾಗಿದೆ. ಎಚ್ಚರಿಕೆಯ ಸೈರನ್ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸುವ ಉದ್ದೇಶದಿಂದ ಧ್ವನಿವರ್ಧಕವನ್ನು ಕೂಡ ಅಳವಡಿಸಲಾಗಿದೆ. ಈ ಯಂತ್ರದಿಂದ ವೇಗವಾಗಿ ಸೋಂಕು ನಿವಾರಕ ಸಿಂಪಡಣೆ ಮಾಡಬಹುದಾಗಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಎಸ್.ಆರ್. ವಿಶ್ವನಾಥ್, ಮೇಯರ್ ಗೌತಮ್‌ಕುಮಾರ್, ಉಪ ಮೇಯರ್ ರಾಮಮೋಹನರಾಜು, ಅಪೀಲು ಸ್ಥಾಯಿ ಸಮಿತಿ ಅಧ್ಯಕ್ಷ ಲಕ್ಷ್ಮೀನಾರಾಯಣ, ಪಾಲಿಕೆ ಆಯುಕ್ತ ಅನಿಲ್‌ಕುಮಾರ್, ವಿಶೇಷ ಆಯುಕ್ತ ಡಿ. ರಂದೀಪ್, ಮುಖ್ಯ ಆರೋಗ್ಯಾಧಿಕಾರಿ ಡಾ. ವಿಜೇಂದ್ರ ಅಮೇರಿಕನ್ ಹಾಗೂ ರೋಡ್ ಟೆಕ್ನಾಲಜಿ ಅಂಡ್ ಸಲ್ಯೂಷನ್ಸ್ ಎಂಡಿ ಭಾನುಪ್ರಭಾ ಮತ್ತಿತರರು ಉಪಸ್ಥಿತರಿದ್ದರು.

ಆಧಾರ:ವಿಜಯವಾಣಿ, ದಿನಾಂಕ:30.06.2020